ಶ್ರೀ ಹೆಚ್.ಸಿ.ಬಾಲಕೃಷ್ಣ :– ಎಲ್ಲಾ ಸಚಿವರ ಪರವಾಗಿ ಮಾನ್ಯ ಕಾನೂನು ಸಚಿವರೇ ಉತ್ತರ ಕೊಡುತ್ತಿದ್ದಾರೆ. ಮಾನ್ಯ ಸಣ್ಣ ನೀರಾವರಿ ಸಚಿವರು ಸದನದಲ್ಲಿದ್ದರೂ ಅವರೇ ಉತ್ತರ ಕೊಟ್ಟರು.

ಶ್ರೀ ಶಿವರಾಜ್ ಎಸ್.ತಂಗಡಗಿ :– ಮಾನ್ಯ ಕಾನೂನು ಸಚಿವರು ಆಗಲೇ ಉತ್ತರ ಕೊಟ್ಟಾಗ ನಾನು ಸದನದಲ್ಲಿ ಇರಲಿಲ್ಲ.

ಅಧ್ಯಕ್ಷರು :– ಆಯಿತು.

11) **ವಿಷಯ : Truck Terminal ಘಟಕಕ್ಕೆ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಜನ ವಾಸಿಸುತ್ತಿರುವುದರಿಂದ ಸದರಿ ಘಟಕವನ್ನು ರದ್ದುಪಡಿಸುವ ಬಗ್ಗೆ.**

ಶ್ರೀ ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ (ಕುಂದಗೋಳ್) :– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಬರುವಂತಹ ಹುಬ್ಬಳ್ಳಿ ತಾಲ್ಲೂಕಿನ ಅನಶೆಟ್ಟಿಕೆರೆ ಗ್ರಾಮದಲ್ಲಿ ಕಳೆದ ವರ್ಷ ಹಿಂದಿನ ಸರ್ಕಾರದಲ್ಲಿ ಮಂಜೂರಾದಂತಹ truck terminal ಘಟಕಕ್ಕೆ ಸುಮಾರು 56 ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಆದರೆ ಆ ಜಮೀನಿನಲ್ಲಿ ಈಗಾಗಲೇ ಸುಮಾರು 150 ಮನೆಗಳಿವೆ, ಸ್ಮಶಾನ ಇದೆ, ಗೋಮಾಳ ಜಮೀನಿದೆ...

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ. Zero hour ಎಂದರೆ ನಾನು ತಿಳಿದಿರುವ ಮಟ್ಟಿಗೆ, ಅವತ್ತಿನ ಘಟನೆ ಅಥವಾ ಅವರ ಕ್ಷೇತ್ರದಲ್ಲಿ ಆಗಿರುವಂತಹ ಒಂದು ಮಹತ್ವದ ಘಟನೆ ಬಗ್ಗೆ, ಸದನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಸದನದ ಮತ್ತು ಸರ್ಕಾರದ ಗಮನ ಸೆಳೆಯುವುದಕ್ಕೆ Zero hour ಇದೆ. ಮೂರು ವರ್ಷಗಳ ಹಿಂದಿನ ಘಟನೆ ಎಲ್ಲವನ್ನೂ Zero hour ನಲ್ಲಿ ಚರ್ಚೆಗೆ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು :– ಆಯಿತು, ಅದನ್ನು ಸರಿಪಡಿಸೋಣ.

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಅಲ್ಲಿ ಏನಾದರೂ ದೊಡ್ಡ ಹೊಡೆದಾಟವಾಗಿ, ಕೊಲೆಯಂತಹ ಮಹತ್ವದ ಘಟನೆ ಏನಾದರೂ ನಡೆದಿದ್ದರೆ, ಅದರ ಬಗ್ಗೆ ಸರ್ಕಾರದ ಗಮನ ಸೆಳೆಯಲು Zero hour ನಲ್ಲಿ ಪ್ರಸ್ತಾಪಿಸಬಹುದಾಗಿತ್ತು.

ಅಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೆ, ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ :– ಕ್ಷೇತ್ರದ ಸಮಸ್ಯೆ ಬಗ್ಗೆ Zero hour ನಲ್ಲಿ ಪ್ರಸ್ತಾಪಿಸುವುದಕ್ಕಾಗುತ್ತದೆಯೇ? ನಿಯಮಾವಳಿ ತೆಗೆಯಿರಿ, ಅದು ಏನು ಹೇಳುತ್ತದೆ ಎಂಬುದನ್ನು ನೋಡಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರು ತಮ್ಮ ಪ್ರಸ್ತಾವವನ್ನು ಮುಂದುವರೆಸಿ.

(ಗೊಂದಲ)

ಶ್ರೀ ಸಿ.ಎಸ್. ಶಿವಳ್ಳಿ : ಮಾನ್ಯ ಅಧ್ಯಕ್ಷರೆ ಅಲ್ಲಿ ಈಗಾಗಲೇ 150ಕ್ಕೂ ಹೆಚ್ಚು ಮನೆಗಳು ಇದೆ. ಅವರಿಗೆ ಪಟ್ಟಾ ಬುಕ್ ಇದೆ. ಅಲ್ಲಿ ಸುಮಾರು 800 ರಿಂದ 900 ಜನರು ವಸತಿ ನಿವೇಶನಕ್ಕಾಗಿ ಬೇಡಿಕೆಯನ್ನು ಇಟ್ಟಿದ್ದಾರೆ. ಆ ಭಾಗದಲ್ಲಿ APMC godown ಸಹ ಇದೆ. ದನಗಳನ್ನು ಮೇಯಿಸುವುದಕ್ಕೆ ಗೋಮಾಳದ ಜಮೀನುಗಳೂ ಇವೆ. ಅಲ್ಲಿಯೇ ಎಲ್ಲಾ ಜಾತಿ ಜನಾಂಗದವರು ಹೂಳುವುದಕ್ಕೆ ಸ್ಮಶಾನ ಇದೆ. ಕಾರಣ ಅಲ್ಲಿಯ ಜನರ ಹಿತದೃಷ್ಟಿಯಿಂದ ಗ್ರಾಮದ ಹಿತದೃಷ್ಟಿಯಿಂದ ಆ ಘಟಕವನ್ನು ಬೇರೆ ಕಡೆಗೆ ಸ್ಥಳಾಂತರಿಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಅದು ನಮಗೆ ಬೇಡವೆಂದು ಅಲ್ಲಿ ಗ್ರಾಮ ಪಂಚಾಯಿತಿಯವರೂ ಕೂಡ ಠರಾವು ಮಾಡಿದ್ದಾರೆ. ಅದನ್ನು ಗ್ರಾಮದ ಹಿತದೃಷ್ಟಿಯಿಂದ ಅದನ್ನು ಸ್ಥಳಾಂತರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ.ಕಂಪನಿ ವತಿಯಿಂದ ಟ್ರಕ್ ಟರ್ಮಿನಲ್ ನಿರ್ಮಾಣ ಮಾಡಲು ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು ಅಂಚಟಗೇರಿ ಗ್ರಾಮದ ಸರ್ವೇ ನಂ:128ರ 20 ಎಕರೆ 17 ಗುಂಟೆ, 87/2ರ 14 ಎಕರೆ 11 ಗುಂಟೆ ಮತ್ತು 86ರ 21 ಎಕರೆ 25 ಗುಂಟೆ ಸೇರಿ ಒಟ್ಟು 56 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನನನ್ನು ಮಂಜೂರಾತಿ ಮಾಡಲಾಗಿದೆ. ಅದರಂತೆ ಜಿಲ್ಲಾಧಿಕಾರಿ ಧಾರವಾಡರವರು ಕಂದಾಯ ಇಲಾಖೆಯಿಂದ ಕಂಪನಿಯ ಹೆಸರಿಗೆ ವರ್ಗಾಯಿಸಿರುತ್ತಾರೆ. ಈ ವಿಸ್ತೀರ್ಣದ ಜಮೀನಿಗೆ

ಸಂಸ್ಥೆಯಿಂದ ಸರ್ಕಾರಕ್ಕೆ ರೂ.74,85,593.00 ಗಳನ್ನು ಪಾವತಿಸಲಾಗಿದೆ. ಎಲ್ಲಾ ಕಂದಾಯ ದಾಖಲೆಗಳಲ್ಲೂ ಸಂಸ್ಥೆಯ ಹೆಸರಿಗೆ ವರ್ಗಾಯಿಸಲಾಗಿದೆ. ಸದರಿ ಡಿ.ದೇವರಾಜ ಅರಸ್ ಟ್ರಕ್ ಟರ್ಮಿನಲ್ ಯೋಜನಾ ವರದಿ ತಯಾರಿಸಲು ನೇಮಕವಾಗಿರುವ ವಾಸ್ತುಶಿಲ್ಪಿ/ಸಲಹೆಗಾರರು ಸರ್ವೇ ನಂಬರ್ 86ರಲ್ಲಿ ಸರ್ಕಾರಿ ಜಮೀನಿನಲ್ಲಿ 24 ಮನೆ ಹಾಗೂ 4 ಗುಡಿಸಲುಗಳು ಅನಧಿಕೃತವಾಗಿ ನಿರ್ಮಾಣವಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ. ಸದರಿ ಮನೆ ಮತ್ತು ಗುಡಿಸಲುಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿ, ಧಾರವಾಡರವರಿಗೆ ದಿನಾಂಕ:4.12.2012ರಂದು ಮನವಿ ಸಲ್ಲಿಸಲಾಗಿದೆ. ಉದ್ದೇಶಿತ ಟ್ರಕ್ ಟರ್ಮಿನಲ್ ಜಾಗದಲ್ಲಿ ಯಾವುದೇ ದೇವಾಲಯ, ಕಟ್ಟಡ, ಶಾಲೆ ಮತ್ತು ಸ್ಮಶಾನ ಇರುವುದಿಲ್ಲ. ಇಲ್ಲಿ ಒಂದು ದೇವಸ್ಥಾನ ಇದೆ ಎಂದು ಹೇಳುತ್ತಾರೆ. ಅಲ್ಲಿ ಒಂದು ಸುಂದರವಾದ ತ್ರಿಶೂಲವನ್ನು ಇಟ್ಟಿದ್ದಾರೆ. ಅಲ್ಲಿ 24 ಮನೆ ಹಾಗೂ 4 ಗುಡಿಸಲುಗಳು ಇವೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಶಿವಳ್ಳಿಯವರ ಜೊತೆಯಲ್ಲಿ ಕುಳಿತು ಅವರಿಗೆ ತೊಂದರೆಯಾಗದ ರೀತಿಯಲ್ಲಿ ಸಹಾಯ ಮಾಡುತ್ತೇನೆ. ಆದರೆ ಟ್ರಕ್ ಟರ್ಮಿನಲ್ ನಮಗೆ ಅವಶ್ಯಕವಾಗಿರಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಪರಿಶೀಲನೆ ಮಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಆಯಿತು. ಶ್ರೀ ರೇವಣ್ಣನವರೆ, ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮನವಿಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ನಾನು ನಿಮ್ಮ ಹೆಸರನ್ನು ಆಗಲೇ ಕರೆದಿದ್ದೆ. ಆಗ ನೀವು ಸದನಕ್ಕೆ ಬಂದಿರಲಿಲ್ಲ.

ಶ್ರೀ ಸಿ.ಟಿ.ರವಿ : ನಾನು ಇಲ್ಲಿಯೇ ಇದ್ದೇನೆ.

ಅಧ್ಯಕ್ಷರು : ಆಯಿತು, ನಿಮಗೆ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಸಿ.ಟಿ.ರವಿ : ನಿನ್ನೆ ದಿನ ಕೊಟ್ಟಿರುವವರನ್ನು ಕರೆಯುತ್ತೇವೆಂದು ತಾವು ಹೇಳಿದ್ದೀರಿ. ನಮ್ಮನ್ನು ಲೆಕ್ಕದಿಂದ ಬಿಟ್ಟಿರುತ್ತೀರಿ.

ಅಧ್ಯಕ್ಷರು : ಇವೆಲ್ಲವೂ ನಿನ್ನೆಯದೇ ಆಗಿದೆ. ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಮೂರು ದಿವಸದಿಂದಲೂ ಕೇಳುತ್ತಿದ್ದೇನೆ. 7ನೇ ತಾರೀಖು ಕೊಟ್ಟಿದ್ದೇನೆ. ತಾವು latest ಆಗಿರುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲವೆಂದು ಮಾನ್ಯ ಶಿವಲಿಂಗೇಗೌಡರು ಹೇಳುತ್ತಿದ್ದಾರೆ. 3-4 ವರ್ಷದ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ.

ಅಧ್ಯಕ್ಷರು : ನಾನು ಆ stand ಅನ್ನು ತೆಗೆದುಕೊಂಡು ಬಿಟ್ಟರೆ ತೊಂದರೆಯಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ತಾವು ಹೇಳುವುದಕ್ಕೆ ಬದ್ಧನಾಗಿದ್ದೇನೆ.

ಅಧ್ಯಕ್ಷರು : ನಾನು ಉಳಿದಂತಹ ಎಲ್ಲಾ ಸ್ನೇಹಿತರುಗಳಿಗೆ accommodate ಮಾಡುವ ಹಾಗೆ ಮಾಡುತ್ತಿದ್ದೇನೆ. ನೀವು ಹೇಳುವ principles ಅನ್ನು apply ಮಾಡಿಬಿಟ್ಟರೆ ಬಹಳಷ್ಟು ಬರುವುದೇ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ದಿನಾಂಕ: 5ನೇ ತಾರೀಖು ಬಂದಂತಹ ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ದೇವರಿಗೆ ಕರೆಂಟ್ ಇಲ್ಲ, ಅರ್ಚಕರಿಗೆ ವೇತನ ಕಟ್". ಒಂದು ವರ್ಷದಿಂದ ಅರ್ಚಕರಿಗೆ ವೇತನವು ಇಲ್ಲ, ದೇವರಿಗೆ current ಇಲ್ಲ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಕೇಳಿರುವುದು ಇದಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಮೊನ್ನೆ ದಿನ 7ನೇ ತಾರೀಖಿನ ದಿವಸ ಕೊಟ್ಟಿದ್ದೇನೆ, ಸ್ವಾಮಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಇದನ್ನು ಕೇಳುತ್ತೀರೋ ಅಥವಾ ಇಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ : ಯಾವುದು, ಸರ್?

ಅಧ್ಯಕ್ಷರು : ಚಿಕ್ಕನಾಯಕನಹಳ್ಳಿಯಿಂದ ತಿಪಟೂರು ಮುಖ್ಯರಸ್ತೆಯಿಂದ, ಅದರ ಬಗ್ಗೆ ತಾವು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದನ್ನು ಕೇಳುತ್ತಿದ್ದೇನೆ.

12) ವಿಷಯ : ರಸ್ತೆ ದುರಸ್ತಿ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ಹಾಸನ ರಸ್ತೆಯನ್ನು ಸುಮಾರು 238